# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1046 |
| ಸದಸ್ಯರ ಹೆಸರು | ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗುಲ್ಬರ್ಗಾ ಜಿಲ್ಲೆಯ ಕಾಳಗಿ ತಾಲ್ಲೂಕು ರಚನೆಯಾದ ಮೇಲೆ ಈ ತಾಲ್ಲೂಕಿಗೆ ಎಷ್ಟು ಸರ್ಕಾರಿ ಕಛೇರಿಗಳ ಅಗತ್ಯತೆ ಇದೆ, ಎಷ್ಟು ಸರ್ಕಾರಿ ಕಛೇರಿಗಳು ಅಲ್ಲಿಗೆ ಸ್ಥಳಾಂತರಗೊಂಡಿವೆ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 127 ಭೂದಾಪು 2017, ದಿನಾಂಕ:30-01-2018 ರನ್ವಯ ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಚಿತ್ತಾಪುರ ತಾಲ್ಲೂಕುಗಳನ್ನು ವಿಭಜಿಸಿ ನೂತನ ಕಾಳಗಿ ತಾಲ್ಲೂಕನ್ನು ರಚಿಸಲಾಗಿದೆ.<br><br>ನೂತನ ಕಾಳಗಿ ತಾಲ್ಲೂಕಿಗೆ ವಿವಿಧ ಇಲಾಖೆಯ 29 ಸರ್ಕಾರಿ ಕಛೇರಿಗಳ ಅಗತ್ಯತೆ ಇದ್ದು, ಪ್ರಸ್ತುತ ಈ ಕೆಳಕಂಡ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ:-<br>1. ತಹಸೀಲ್ದಾರ್ ಕಛೇರಿ<br>2. ಖಜಾನೆ ಇಲಾಖೆ<br>3. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಕಛೇರಿ<br>4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ಯ ಉಪ ವಿಭಾಗ<br>5. ಪಟ್ಟಣ ಪಂಚಾಯತಿ ಕಾಳಗಿ<br>6. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಕಛೇರಿ<br><br>ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಛೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿ ಕಛೇರಿಗಳನ್ನು ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳಿಗೆ ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: ಕಂಇ/67/ ಎಲ್‌ಆರ್‌ಡಿ/2021, ದಿನಾಂಕ:27/09/2023 ರಲ್ಲಿ ನಿರ್ದೇಶನ ನೀಡಲಾಗಿದೆ. |

| | | |
|---|---|---|
| | | ಕಾಳಗಿ ತಾಲ್ಲೂಕಿಗೆ ಅವಶ್ಯವಿರುವ ಇನ್ನುಳಿದ ಕಛೇರಿಗಳ ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಲಾಗಿದೆ. |
| ಆ) | ಸ್ಥಳಾಂತರವಾಗದಿರಲು ಕಾರಣವೇನು; ಇನ್ನೂ ಸ್ಥಳಾಂತರಗೊಳ್ಳದೇ ಇರುವ ಕಛೇರಿಗಳನ್ನು ಯಾವಾಗ ಸ್ಥಳಾಂತರಗೊಳಿಸಲಾಗುವುದು? | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 84 ಡಬ್ಲ್ಯೂಬಿಆರ್ 2024, ದಿನಾಂಕ:05.10.2024 ರಲ್ಲಿ ಕಾಳಗಿ ತಾಲ್ಲೂಕಿಗೆ ಹೊಸದಾಗಿ ಪ್ರಜಾ ಸೌಧ, ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡವನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ತಾಲ್ಲೂಕು ಮಟ್ಟದ ಕಛೇರಿಗಳನ್ನು ಸ್ಥಳಾಂತರಗೊಳಿಸಲಾಗುವುದು. |

**ಸಂಖ್ಯೆ: ಕಂಇ 90 ಎಲ್‌ಆರ್‌ಡಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ಅನುಬಂಧ-

| ಕಾಳಗಿ ತಾಲೂಕಿಗೆ ಸ್ಥಳಾಂತರಿಸುವ ಕಛೇರಿಗಳ ವಿವರ | |
|---|---|
| ಕ್ರ.ಸಂ | ಇಲಾಖೆ/ಕಛೇರಿಯ ಹೆಸರು |
| 01 | ತಾಲ್ಲೂಕು ನ್ಯಾಯಲಯ |
| 02 | ಉಪ ನೋಂದಾಣಿಧಿಕಾರಿಗಳ ಕಛೇರಿ |
| 03 | ಭೂ ದಾಖಲೆಗಳ ಇಲಾಖೆ |
| 04 | ತಾಲೂಕು ಆರೋಗ್ಯ ಇಲಾಖೆ |
| 05 | ಪಶುಸಂಗೋಪನೆ ಇಲಾಖೆ |
| 06 | ನೀರಾವರಿ ಇಲಾಖೆ |
| 07 | ವಲಯ ಅರಣ್ಯ ಅಧಿಕಾರಿ ಇಲಾಖೆ |
| 08 | ಅಕ್ಷರ ದಾಸೋಹ |
| 09 | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ |
| 10 | ಸಣ್ಣ ನೀರಾವರಿ ಇಲಾಖೆ |
| 11 | ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ |
| 12 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 13 | ರೇಷ್ಮೆ ಇಲಾಖೆ |
| 14 | ಕೃಷಿ ಇಲಾಖೆ |
| 15 | ತೋಟಗಾರಿಕೆ ಇಲಾಖೆ |
| 16 | ಮೀನುಗಾರಿಕೆ ಇಲಾಖೆ |
| 17 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ |
| 18 | ಸಮಾಜ ಕಲ್ಯಾಣ ಇಲಾಖೆ |
| 19 | ಅಗ್ನಿ ಶಾಮಕ ದಳ |
| 20 | ಕಾರ್ಮಿಕ ಇಲಾಖೆ |
| 21 | ಕೃಷೀ ಉತ್ಪನ ಮಾರುಕಟ್ಟೆ |
| 22 | ರಾಜ್ಯ ಆಹಾರ ಉಗ್ರಾಣ ನಿಗಮ |
| 23 | ಅಬಕಾರಿ ನಿರೀಕ್ಷಕರು |

ಅಪರ ಜಿಲ್ಲಾಧಿಕಾರಿಗಳು
ಕಲಬುರಗಿ



Generated from eOffice by S.GURUMURTHY, RD-US-SSLR(SG), UNDER SECRETARY, REVENUE DEPATMENT SEC on 16/12/2024 08:36 PM